## "ನಮ್ಮ ಶಾಲೆ, ನಮ್ಮ ಹೆಮ್ಮೆ"

# 5. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕಲ್ಲುಗುಡ್ಡ

**ಶಾಲೆಯ ಬಗ್ಗೆ :-**

ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕಲ್ಲುಗುಡ್ಡ ಈ ಶಾಲೆಯು 1994 ರಲ್ಲಿ ಸ್ಥಾಪನೆಯಾಗಿದ್ದು, ಕೋಣಂದೂರು ಕ್ಲಸ್ಟರ್, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆಯಲ್ಲಿದೆ. ಶಾಲೆಯು ಒಂದು ಉತ್ತಮ ಶಾಲೆಯಾಗಿದ್ದು ಕ್ಲಸ್ಟರ್ ಕೇಂದ್ರದಿಂದ 3 ಕಿ.ಮೀ. ದೂರದಲ್ಲಿದ್ದು ತಾಲ್ಲೂಕು ಕೇಂದ್ರದಿಂದ 23 ಕಿ.ಮೀ. ದೂರದಲ್ಲಿದೆ. ಪ್ರಸ್ತುತ ಶಾಲೆಯಲ್ಲಿ ಫೌಜಿಯ ಸರವತ್ ಮತ್ತು ಶ್ವೇತಾ ಕೆ.ಟಿ. ಎಂಬ ಇಬ್ಬರು ಶಿಕ್ಷಕರಿದ್ದು 12 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

**ಇತಿಹಾಸ :-**

2018ರ ಸೆಪ್ಟೆಂಬರ್‌ಗೆ ಶಾಲೆ ಪ್ರಾರಂಭವಾಗಿ 24 ವರ್ಷಗಳು ಆದವು. ಆದರೆ ಶಾಲೆಯ ಅಸ್ತಿತ್ವಕ್ಕೆ, ಸ್ಥಾಪನೆಗೆ ಗ್ರಾಮಸ್ಥರ, ಪೋಷಕ ಪ್ರತಿನಿಧಿಗಳ ಉದಾರ ದಾನಿಗಳ ಹೋರಾಟದ ಕಥೆ ಅಜರಾಮರ. 4 ಜನವಸತಿ ಪ್ರದೇಶಗಳಿಂದ ಕೂಡಿದ ಈ ಊರಿಗೆ ಶಾಲೆಯ ಕೊರತೆಯಿದ್ದು ಶಾಲೆಯ ಸ್ಥಾಪನೆಗೆ ಊರಿನವರು ಸರ್ಕಾರದೊಂದಿಗೆ ತಮ್ಮ ಅಳಲನ್ನು ತೋಡಿಕೊಂಡು 1994ರ ಸೆಪ್ಟೆಂಬರ್ 11ಕ್ಕೆ ದಾನಿಗಳಿಂದ ಒಂದು ಜಾಗವನ್ನು ಪಡೆದು ಶಾಲೆಯನ್ನು ಪ್ರಾರಂಭಿಸಿದರು. ತಮ್ಮ ಮನೆಯಿಂದಲೇ ಕುರ್ಚಿ, ಬೆಂಚು ಮಕ್ಕಳಿಗೆ ಆಸನದ ವ್ಯವಸ್ಥೆಯನ್ನೂ ಮಾಡುವುದರ ಮೂಲಕ ಶಾಲೆಯನ್ನು ಪ್ರಾರಂಭಿಸಲಾಯಿತು. ಶಾಲೆ ಪ್ರಾರಂಭವಾದರೂ ಶಾಲೆಯಲ್ಲಿ ಯಾವುದೇ ಭೌತಿಕ ಸೌಲಭ್ಯಗಳು ಇರಲಿಲ್ಲ ಇಲಾಖಾ ಅಧಿಕಾರಿಗಳ ಮಾರ್ಗದರ್ಶನ ಹೆತ್ತವರ ಸಹಕಾರ, ಊರವರ, ದಾನಿಗಳ ಪ್ರೋತ್ಸಾಹ, ಪರಿಣಿತ ಅಧ್ಯಾಪಕ ವೃಂದದ ಶ್ರಮದೊಂದಿಗೆ ಈ ಶಾಲೆಯು ಯಶಸ್ಸಿನೊಂದಿಗೆ ಮುನ್ನಡೆಯಿತು.

**ಅಂದು :-**

2 ವರ್ಷದ ಹಿಂದೆ ಈ ಶಾಲೆಯಲ್ಲಿ ಯಾವುದೇ ಭೌತಿಕ ಸೌಲಭ್ಯಗಳಿಲ್ಲದ ಕಾರಣ ಮಕ್ಕಳ ದಾಖಲಾತಿ ಸಂಖ್ಯೆ ಕಡಿಮೆಯಾಗಿತ್ತು. ಜೊತೆಗೆ ಮಕ್ಕಳ ಶೈಕ್ಷಣಿಕ ಪ್ರಗತಿಯು ಕುಂಠಿತವಾಗಿತ್ತು.

**ಇಂದು :-**

2 ವರ್ಷದ ಹಿಂದೆ ಅಳಿವಿನ ಅಂಚಿನಲ್ಲಿದ್ದ ಈ ಶಾಲೆಗೆ ವರ್ಗಾವಣೆಯಾಗಿ ಬಂದ ಹಾಗೂ ಹೊಸದಾಗಿ ಆಯ್ಕೆಯಾಗಿ ಬಂದ ಶಿಕ್ಷಕಿಯರ ಹಲವಾರು ಚಟುವಟಿಕೆಗಳ ಕಾರಣದಿಂದಾಗಿ ತನ್ನ ದಾಖಲಾತಿಯನ್ನು 8 ರಿಂದ 12 ಕ್ಕೆ ಹೆಚ್ಚಿಸಿಕೊಂಡಿದೆ. ಶಾಲಾ ಪ್ರಗತಿಯನ್ನು ಕಂಡ ಪೋಷಕರು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಯಿಂದ ಈ ಶಾಲೆಗೆ ದಾಖಲು ಮಾಡಿರುತ್ತಾರೆ. ಪ್ರಸ್ತುತ ಶಾಲೆಯು ಉತ್ತಮ ಹಾಜರಾತಿಯನ್ನೂ ಸಹ ಉಳಿಸಿಕೊಂಡಿದೆ. ಶಿಕ್ಷಕರು, ಪೋಷಕರು, ಗ್ರಾಮಸ್ಥರು ಹಾಗೂ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಶಾಲೆ ಉತ್ತಮ ಆಕರ್ಷಣೀಯ ವಾತಾವರಣ ಹಾಗೂ ಉತ್ತಮ ಶೈಕ್ಷಣಿಕ ಪರಿಸರ ಪಡೆಯಲು ಸಾಧ್ಯವಾಗಿದೆ. ಶಾಲೆಯಲ್ಲಿ ಈ ಎರಡು ವರ್ಷಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಾಣಬಹುದಾಗಿದೆ. ಮಕ್ಕಳನ್ನು ಶಾಲೆಯತ್ತ ಆಕರ್ಷಿಸಲು ಶಾಲಾ ಗೋಡೆಗಳನ್ನು ಬಣ್ಣದ ಚಿತ್ರಗಳಿಂದ ಅಲಂಕರಿಸಲಾಗಿದೆ. ವ್ಯವಸ್ಥಿತವಾದ ನಲಿಕಲಿ ಮತ್ತು ಕಲಿನಲಿ ಕೊಠಡಿಗಳನ್ನು ಅತ್ಯಂತ ಆಕರ್ಷಣೀಯವಾಗಿ ಸಂಯೋಜನೆ ಮಾಡಲಾಗಿದೆ. ಶಾಲಾ ಮುಂಭಾಗದಲ್ಲಿ ಹೊಸದಾಗಿ ಕಾಂಪೌಂಡ್ ವ್ಯವಸ್ಥೆ ಮತ್ತು ಶಾಲೆಯ ಸುತ್ತಲೂ ಬೇಲಿ ವ್ಯವಸ್ಥೆಯನ್ನು ಮಾಡಲಾಗಿದೆ. ಹೊಸದಾಗಿ ಆಟದ ಮೈದಾನದ ನಿರ್ಮಾಣ ಮಾಡಲಾಗಿದೆ. ಉತ್ತಮವಾದ ಗ್ರಂಥಾಲಯ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯ, ಸ್ವಚ್ಛ

ಶೌಚಾಲಯಗಳು ಮಕ್ಕಳಿಗೆ ನೀರು ಬಳಕೆಗೆ ಹೊಸ ನಲ್ಲಿಗಳ ನಿರ್ಮಾಣ ಮಾಡುವುದರ ಮೂಲಕ ಶಾಲಾ ಭೌತಿಕ ಸೌಲಭ್ಯಗಳನ್ನು ಮಕ್ಕಳು ಸಮರ್ಪಕವಾಗಿ ಬಳಸಿಕೊಳ್ಳುವಂತೆ ಅವಕಾಶವನ್ನು ಕಲ್ಪಿಸಿಕೊಡಲಗಿದೆ.

ವಿದ್ಯಾರ್ಥಿಗಳ ಮನದಾಳದಲ್ಲಿ ಸುಪ್ತವಾಗಿರುವ ಸಾಹಿತ್ಯಿಕ, ಸಾಂಸ್ಕೃತಿಕ, ಕ್ರೀಡೆ, ವಿಜ್ಞಾನದಂತಹ ಪ್ರತಿಭೆಗಳನ್ನು ಜಾಗೃತಗೊಳಿಸುವಲ್ಲಿ ಹಲವು ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ನಡೆಸಲಾಗುತ್ತಿದೆ.

## ಶಾಲೆಯಲ್ಲಿ ಹೊಸದಾಗಿ ಕೈಗೊಳ್ಳಲಾದ ವಿಶೇಷ ಕಾರ್ಯಚಟುವಟಿಕೆಗಳು :

- ಮಕ್ಕಳಿಗೆ ಸ್ಮಾರ್ಟ್ ಕ್ಲಾಸ್‌ಗಳ ಮೂಲಕ ಪಾಠ ಬೋಧನೆ
- ಆಕರ್ಷಣೀಯ ನಲಿಕಲಿ ಕೊಠಡಿಯ ಸಂಯೋಜನೆ
- ಆಕರ್ಷಣೀಯ ನಲಿಕಲಿ ಗುಂಪು ರಚನಾ ತಟ್ಟೆಗಳ ರಚನೆ
- ವಿಶೇಷ ಕಲಿಕೋಪಕರಣಗಳು / ಬೋಧನೋಪಕರಣಗಳ ಬಳಕೆ
- ಮಕ್ಕಳನ್ನು ಶಾಲೆಯತ್ತ ಆಕರ್ಷಿಸಲು ಶಾಲಾ ಗೋಡೆಗಳ ಮೇಲೆ ಸುಂದರ ಚಿತ್ರಗಳ ರಚನೆ
- ಶಾಲಾ ಮಕ್ಕಳಿಗೆ ಆಟೋಟ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ ಇತ್ಯಾದಿ ಸ್ಪರ್ಧೆಗಳ ಆಯೋಜನೆ
- ಗ್ರಾಮಸ್ಥರು ಹಾಗೂ ಪೋಷಕರಿಗೆ ಆಟೋಟ ಸ್ಪರ್ಧೆ ಮತ್ತು ರಂಗೋಲಿ ಸ್ಪರ್ಧೆಗಳ ಆಯೋಜನೆ
- ಮನೆಯಲ್ಲಿ ಆಚರಿಸುವ ಎಲ್ಲಾ ವರ್ಗ / ಜನಾಂಗದ ಕೆಲವು ಹಬ್ಬಗಳ ಆಚರಣೆ ಮಾಡುವುದು
- ಪ್ರತಿಭಾ ಕಾರಂಜಿ ಮತ್ತು ಕಲಿಕೋತ್ಸವದಲ್ಲಿ ಮಕ್ಕಳ ಭಾಗವಹಿಸುವಿಕೆಗೆ ಪ್ರೋತ್ಸಾಹ
- ಶಾಲಾ ಅದ್ದೂರಿ ವಾರ್ಷಿಕೋತ್ಸವ ಸಮಾರಂಭ ಕಾರ್ಯಕ್ರಮದ ಆಯೋಜನೆ
- ಸಾಧಕರಿಗೆ ಸನ್ಮಾನ ಕಾರ್ಯಕ್ರಮ
- ಕೈತುತ್ತು ಊಟ ಕಾರ್ಯಕ್ರಮ
- ಶಾಲಾ ಶೈಕ್ಷಣಿಕ ಪ್ರವಾಸ
- ವಿಶೇಷ ದತ್ತು ಯೋಜನೆ ಇತ್ಯಾದಿ ಕಾರ್ಯಕ್ರಮಗಳು

## ನಲಿ ಕಲಿ :

ನಲಿಕಲಿಗೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಅಂಶಗಳನ್ನು ಅಳವಡಿಸಲಾಗಿದೆ. ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕಿಯಾದ ಫೌಜಿಯ ಸರವತ್ ಇವರು ರಾಜ್ಯ ಸಂಪನ್ಮೂಲ ವ್ಯಕ್ತಿಯಾಗಿ ಹೊರಹೊಮ್ಮಿದ್ದಾರೆ. ಸ್ವ ಕಲಿಕೆ, ಸ್ವವೇಗದ ಕಲಿಕೆ ಮತ್ತು ಸಂತಸದಾಯಕ ಕಲಿಕೆಗೆ ಶಾಲೆಯು ಮಾದರಿಯಾಗಿದೆ. ನಲಿಕಲಿ ವಿಧಾನದಲ್ಲಿಯೇ ವಿದ್ಯಾರ್ಥಿಗಳು ಕಲಿಯುತ್ತಿದ್ದು ಕಲಿಕೆ ತೃಪ್ತಿಕರವಾಗಿದೆ. ಕಲಿಕಾ ವಾತಾವರಣವು ಶಿಶು ಕೇಂದ್ರಿತ ವಾತಾವಾರಣವಾಗಿದ್ದು ಮಕ್ಕಳಿಗೆ ಮುಕ್ತ ಅವಕಾಶ ಕಲ್ಪಿಸಿಕೊಡಲಾಗಿದೆ. ನಲಿಕಲಿಯ ಎಲ್ಲಾ ಅಂಶಗಳನ್ನು ಯಥಾವತ್ತಾಗಿ ಅಳವಡಿಸಲಾಗಿದೆ. ಇಂಗ್ಲೀಷ್ ಕಲಿಕೆಗೆ ಸ್ಮಾರ್ಟ್‌ಕ್ಲಾಸ್‌ಗಳ ಸೌಲಭ್ಯ ಮಾಡಲಾಗಿದೆ. ಮುಂತಾದ ಕಲಿಕೆಗೆ ಪೂರಕವಾದ ವ್ಯವಸ್ಥೆಗಳನ್ನು ಅಳವಡಿಸಿಕೊಂಡು ಇವೆಲ್ಲವನ್ನು ಉಚಿತವಾಗಿ ನೀಡಲಾಗುತ್ತಿದೆ.

ಈ ಶಾಲೆಯ ಬೆಳವಣಿಗೆಗೆ ಹಳೆಯ ವಿದ್ಯಾರ್ಥಿಗಳು, ಶಾಲಾಭಿವೃದ್ಧಿ ಸಮಿತಿ, ಪೋಷಕರು, ಪೋಷಕ ಪ್ರತಿನಿಧಿಗಳು, ಜನಪ್ರತಿನಿಧಿಗಳು, ಉದಾರ ದಾನಿಗಳು, ಶಾಲಾ ಶಿಕ್ಷಕರ ಮುತುವರ್ಜಿ ವಹಿಸಿಕೊಂಡು ಸಹಕರಿಸುತ್ತಿರುವುದು ಶ್ಲಾಘನೀಯ ಇಲಾಖೆಯ ಅಧಿಕಾರಿಗಳ ಮಾರ್ಗದರ್ಶನ ಮತ್ತು ಸಲಹೆಯ ಮೇರೆಗೆ ಶಾಲೆಗೆ ಉತ್ತಮ ಮೆರಗು ನೀಡಲಾಗಿದೆ. ವಿಶೇಷವಾಗಿ ಶ್ರೀಯುತ ಆರ್.ಡಿ. ರವೀಂದ್ರ, ಗುರುಚೇತನ ನಲಿಕಲಿ ಸಾಹಿತ್ಯ

ರಚನಾ ತಂಡದ ಮುಖ್ಯಸ್ಥರು ಹಾಗೂ ಶ್ರೀಯುತ ಫಣೀಶ್ ಶಿವಮೊಗ್ಗ ಜಿಲ್ಲಾ ನಲಿಕಲಿ ನೋಡಲ್ ಅಧಿಕಾರಿಯವರ ಸಲಹೆ ಹಾಗೂ ಮಾರ್ಗದರ್ಶನ ಈ ಶಾಲೆ ಉತ್ತಮ ನಲಿಕಲಿ ಶಾಲೆಯಾಗಿ ಹೊರಹೊಮ್ಮಲು ಸಹಕಾರಿಯಾಗಿದೆ.

ಇಲಾಖೆಯ ಧ್ಯೇಯಧೋರಣೆಗೆ ಅನುಸಾರವಾಗಿ ಶಾಲಾಭಿವೃದ್ಧಿ ಸಮಿತಿಯವರ ಸಹಕಾರದೊಂದಿಗೆ ಪೋಷಕರ ಹಾಗೂ ವಿದ್ಯಾರ್ಥಿಗಳ ನಿರೀಕ್ಷೆಗೆ ಅನುಗುಣವಾಗಿ ಇನ್ನೂ ಹೆಚ್ಚಿನ ಪರಿಶ್ರಮದೊಂದಿಗೆ ಗುಣಾತ್ಮಕ ಶಿಕ್ಷಣದತ್ತ ಕೊಂಡೊಯ್ಯಲು ತಮ್ಮೆಲ್ಲರ ಸಹಕಾರವನ್ನು ಕೋರುತ್ತೇವೆ.



















ಸ.ಕಿ.ಪ್ರಾ.ಶಾಲೆ.
ಕಲ್ಲುಗುಡ್ಡ








